sdmimd

**Andolana**

Date: 24-11-2018 Page No: 05

Edition: Mysore Language: Kannada

# ಅತಿ ಆಸೆಯಿಂದ ಆರ್ಥಿಕ ಸಬಲತೆ ಅಸಾಧ್ಯ

## ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಡಾ.ಆರ್.ಬಾಲಸುಬ್ರಹ್ಮಣ್ಯಂ ಅಭಿಪ್ರಾಯ




ಮೈಸೂರು,ನ.೨೩– ಎಲ್ಲವೂ ಬೇಕು, ಬೇಕು ಎಂಬ ಮಾನವನ ಅತಿ ಆಸೆಯಿಂದಾಗಿ ಪ್ರಸ್ತುತ ನಾವು ಆರ್ಥಿಕವಾಗಿ ಸಬಲತೆ ಹಾಗೂ ಸುಸ್ಥಿರ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತಿಲ್ಲ ಎಂದು ವೀ–ಲೀಡ್ ಹಾಗೂ ಗ್ರಾಮ್(ಜಿಆರ್ಎಎಂ) ಸಂಸ್ಥೆ ಅಧ್ಯಕ್ಷ ಡಾ.ಆರ್.ಬಾಲಸುಬ್ರಹ್ಮಣ್ಯಂ ಅಭಿಪ್ರಾಯಪಟ್ಟರು.

ಶುಕ್ರವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನ ಆವರಣದಲ್ಲಿ 'ಆರ್ಥಿಕ ಅಭಿವೃದ್ಧಿ ಹಾಗೂ ಸುಸ್ಥಿರ ಬೆಳವಣಿಗೆ: ಉದಯೋನ್ಮುಖ ಪ್ರವೃತ್ತಿಗಳು' ಎಂಬ ವಿಷಯದ ಬಗ್ಗೆ ಹಮ್ಮಿ ಕೊಳ್ಳಲಾಗಿದ್ದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತ ನಾಡಿದರು.

ಮಾನವನ ಆಸೆಗೆ ಮಿತಿಯೇ ಇಲ್ಲದಂತೆ ಆಗಿದೆ. ಎಲ್ಲವೂ ಬೇಕು, ಬೇಕೆಂಬ ಮನಸ್ಥಿತಿ ಆತನಲ್ಲಿದೆ. ನನಗೆ ಇಷ್ಟು ಸಾಕು ಎಂಬ ಮನೋಭಾವ ಬರುವವರೆಗೂ ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಸುಸ್ಥಿರ ಬೆಳೆವಣಿಗೆ ಸಾಧ್ಯವಿಲ್ಲ. ಹೀಗಾಗಿ ಮಾನವನ ಮನಸ್ಥಿತಿ ಬದಲಾಗಬೇಕಾಗಿದೆ ಎಂದು ಹೇಳಿದರು.

ನಾವು ಸದ್ಯದಲ್ಲಿ ಮೂರು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಮೊದಲಿಗೆ ಪರಿಸರದ ಮೇಲಿನ ಹಾನಿ. ಎರಡನೆಯದಾಗಿ ಸಾಮಾಜಿಕ ಹಾನಿ. ಮೂರನೆಯದಾಗಿ ಜನರ ವೈಯಕ್ತಿಕ ಆಸೆಗಳೂ ಕೂಡ ಸೇರಿವೆ. ಹೀಗಾದಲ್ಲಿ ಸಮಗ್ರ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಸುರಾಮನ್ ಅವರು ಮಾತನಾಡಿದರು. ಡಾ.ಬಿ.ವೆಂಕಟರಾಜ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಎರಡು ದಿನಗಳ ಕಾರ್ಯಾಗಾರದಲ್ಲಿ ೧೫೭ ಹೆಚ್ಚು ಸಂಶೋಧನಾ ಪತ್ರಿಕೆಗಳನ್ನು ಮಂಡಿಸಲಾಗುತ್ತಿದೆ. ಭಾರತ ಮತ್ತು ವಿದೇಶದಿಂದ ಸುಮಾರು ೨೦೦ ಪ್ರತಿನಿಧಿಗಳು ಹಾಜರಾಗುತ್ತಿದ್ದಾರೆ.